ಆ) ಜವಳಿ ನೀತಿ ೨೦೦೪-೦೯ರನ್ವಯ ದೊಡ್ಡಬಳ್ಳಾಪುರ ಹಾಗೂ ಬಳ್ಳಾರಿಯಲ್ಲಿ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಈ ಪಾರ್ಕ್‌ಗಳ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಬನಹಟ್ಟಿ ಮತ್ತು ರಬಕವಿಗಳಲ್ಲಿ ಪವರ್‌ಲೂಂ ಪಾರ್ಕ್ ಸ್ಥಾಪಿಸುವ ಉದ್ದೇಶವಿದೆ.

ಈ) ಅನ್ವಯಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೬೯ (೨೪೧೦)

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಬರಗಾಲ ಎದುರಿಸುತ್ತಿರುವ ಜಿಲ್ಲೆಗಳ ಸಂಖ್ಯೆ ಎಷ್ಟು ? (ಮಾಹಿತಿ ಒದಗಿಸುವುದು) ;

ಆ) ರಾಜ್ಯದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳನ್ನು ಸರ್ಕಾರ ಗುರುತಿಸಿದೆಯೇ ;

ಇ) ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳಿಗೆ ಸರ್ಕಾರ ಶಾಶ್ವತ ಪರಿಹಾರ ಮಾರ್ಗಗಳನ್ನು ಕಲ್ಪಿಸಲಾಗುವುದೇ ;

ಈ) ಹಾಗಾದರೆ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು, ಯಾವ ಕಾಲಮಿತಿ ಹಾಕಿಕೊಂಡು ಶಾಶ್ವತ ಪರಿಹಾರ ಒದಗಿಸಲಾಗುವುದು ?

ಉತ್ತರ

ಅ) ೨೩ ಜಿಲ್ಲೆಗಳು, ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಆಯಾ ವರ್ಷದಲ್ಲಿ ಬೀಳುವ ಮಳೆ ಹಾಗೂ ಬೆಳೆ ಪರಿಸ್ಥಿತಿಯನ್ನು ನೋಡಿಕೊಂಡು ಬರಪೀಡಿತ ಪ್ರದೇಶವೆಂದು ಗುರುತಿಸಲಾಗುತ್ತದೆ.

ಇ) ಬರಗಾಲವು ಪ್ರಕೃತಿ ವಿಕೋಪದಿಂದ ಆಗುವುದರಿಂದ ಶಾಶ್ವತ ಪರಿಹಾರ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಬರ ಪರಿಸ್ಥಿತಿ ಉದ್ಭವಿಸಿದಾಗ ಪರಿಹಾರ ಕಾರ್ಯ ಕೈಗೊಳ್ಳಲಾಗುತ್ತಿದೆ.

ಈ) ಬರ ಪರಿಸ್ಥಿತಿ ಎದುರಿಸಲು ಸರ್ಕಾರವು ಒಟ್ಟು ರೂ. ೨೭೭.೦೦ ಕೋಟಿ ಹಣ ಹಾಗೂ ಕೂಲಿಕಾರರಿಗೆ ಹಂಚಲು ೫೦,೦೦೦ ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ. ಬರ ಪರಿಸ್ಥಿತಿ ಎದುರಿಸಲು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಉದ್ಯೋಗ ಸೃಜಿಸುವಂತಹ ಕಾಮಗಾರಿಗಳಾದ ಸಣ್ಣ ನೀರಾವರಿ ಕೆರೆಗಳ ದುರಸ್ತಿ ಕಾಮಗಾರಿಗಳು, ಹೊಳೆತ್ತುವ ಕಾಮಗಾರಿಗಳು, ಚೆಕ್ ಡ್ಯಾಮ್ಸ್, ಜಲಸಮೃದ್ಧಿ ಕಾಮಗಾರಿಗಳು ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇದಲ್ಲದೆ ಟ್ಯಾಂಕರುಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹೈಡ್ರೊ ಫ್ರಾಕ್ಚರಿಂಗ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಜಾನುವಾರುಗಳಿಗಾಗಿ ಗೋಶಾಲೆಗಳನ್ನು ತೆರೆಯಲಾಗಿದೆ. ಮೇವು ಸಂಗ್ರಹಿಸಲಾಗಿದೆ. ಮೇವು ಬೆಳೆಯಲು ಹಣ ಬಿಡುಗಡೆ ಮಾಡಲಾಗಿದೆ. ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ. ಮೇವು ಖರೀದಿಸಿ ಸಂಗ್ರಹಿಸುವಂತೆ ಸೂಚಿಸಲಾಗಿದೆ. ಮೇವು ಬ್ಯಾಂಕ್ ಗಳನ್ನು ತೆರೆಯಲಾಗಿದೆ. ಬರ ಪರಿಸ್ಥಿತಿಯನ್ನು ಎದುರಿಸಲು ಮೇಲಿನಂತೆ ಎಲ್ಲ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅನುಬಂಧ – ೧

ಬರಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳ ಹೆಸರು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೧	ಬೆಂಗಳೂರು (ನಗರ)	೧) ಆನೇಕಲ್ ೨) ಬೆಂಗಳೂರು (ಉತ್ತರ) ೩) ಬೆಂಗಳೂರು (ದಕ್ಷಿಣ)
೨	ಬೆಂಗಳೂರು ಗ್ರಾಮಾಂತರ	೪) ದೇವನಹಳ್ಳಿ ೫) ದೊಡ್ಡಬಳ್ಳಾಪುರ ೬) ಕನಕಪುರ ೭) ಮಾಗಡಿ ೮) ರಾಮನಗರ ೯) ಚನ್ನಪಟ್ಟಣ ೧೦) ಹೊಸಕೋಟೆ ೧೧) ನೆಲಮಂಗಲ
೩	ಕೋಲಾರ	೧೨) ಬಂಗಾರಪೇಟೆ ೧೩) ಚಿಕ್ಕಬಳ್ಳಾಪುರ ೧೪) ಚಿಂತಾಮಣಿ ೧೫) ಗೌರಿಬಿದನೂರು ೧೬) ಕೋಲಾರ ೧೭) ಮಾಲೂರು ೧೮) ಮುಳಬಾಗಿಲು ೧೯) ಶಿಡ್ಲಘಟ್ಟ ೨೦) ಶ್ರೀನಿವಾಸಪುರ ೨೧) ಬಾಗೇಪಲ್ಲಿ ೨೨) ಗುಡಿಬಂಡೆ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೪	ತುಮಕೂರು	೨೩) ಚಿಕ್ಕನಾಯಕನಹಳ್ಳಿ
		೨೪) ಕೊರಟಗೆರೆ
		೨೫) ಕುಣಿಗಲ್
		೨೬) ಮಧುಗಿರಿ
		೨೭) ಶಿರಾ
		೨೮) ತಿಪಟೂರು
		೨೯) ತುರುವೇಕೆರೆ
		೩೦) ಪಾವಗಡ
		೩೧) ತುಮಕೂರು
		೩೨) ಗುಬ್ಬಿ
೪	ಚಿತ್ರದುರ್ಗ	೩೩) ಚಳ್ಳಕೆರೆ
		೩೪) ಹಿರಿಯೂರು
		೩೫) ಹೊಸದುರ್ಗ
		೩೬) ಮೊಳಕಾಲ್ಮೂರು
		೩೭) ಹೊಳಲ್ಕೆರೆ
		೩೮) ಚಿತ್ರದುರ್ಗ
೬	ದಾವಣಗೆರೆ	೩೯) ಜಗಳೂರು
		೪೦) ಚನ್ನಗಿರಿ
		೪೧) ದಾವಣಗೆರೆ
		೪೨) ಹರಪನಹಳ್ಳಿ
		೪೩) ಹೊನ್ನಾಳಿ
		೪೪) ಹರಿಹರ
೭	ಚಾಮರಾಜನಗರ	೪೫) ಚಾಮರಾಜನಗರ
		೪೬) ಗುಂಡ್ಲುಪೇಟೆ
		೪೭) ಕೊಳ್ಳೇಗಾಲ
		೪೮) ಯಳಂದೂರು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೮	ಮೈಸೂರು	೪೯) ಹೆಚ್.ಡಿ.ಕೋಟೆ
		೫೦) ಕೃಷ್ಣರಾಜನಗರ
		೫೧) ಮೈಸೂರು
		೫೨) ಟಿ.ನರಸೀಪುರ
		೫೩) ನಂಜನಗೂಡು
		೫೪) ಹುಣಸೂರು
		೫೫) ಪಿರಿಯಾಪಟ್ಟಣ
೯	ಮಂಡ್ಯ	೫೬) ಕೃಷ್ಣರಾಜಪೇಟೆ
		೫೭) ಮದ್ದೂರು
		೫೮) ಮಳವಳ್ಳಿ
		೫೯) ಮಂಡ್ಯ
		೬೦) ನಾಗಮಂಗಲ
		೬೧) ಪಾಂಡವಪುರ
		೬೨) ಶ್ರೀರಂಗಪಟ್ಟಣ
೧೦	ಬಳ್ಳಾರಿ	೬೩) ಬಳ್ಳಾರಿ
		೬೪) ಹಡಗಲಿ
		೬೫) ಹೊಸಪೇಟೆ
		೬೬) ಹೆಚ್. ಬಿ. ಹಳ್ಳಿ
		೬೭) ಕೂಡ್ಲಿಗಿ
		೬೮) ನಂಡೂರು
		೬೯) ಸಿರಗುಪ್ಪ
೧೧	ಕೊಪ್ಪಳ	೭೦) ಗಂಗಾವತಿ
		೭೧) ಕೊಪ್ಪಳ
		೭೨) ಕುಷ್ಟಗಿ
		೭೩) ಯಲಬುರ್ಗ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೧೨	ರಾಯಚೂರು	೭೪) ದೇವದುರ್ಗ ೭೫) ಲಿಂಗಸಗೂರು ೭೬) ಮಾನ್ವಿ ೭೭) ಸಿಂಧನೂರು ೭೮) ರಾಯಚೂರು
೧೩	ಗುಲ್ಬರ್ಗ	೭೯) ಆಫಜಲಪುರ ೮೦) ಶೋರಾಪುರ ೮೧) ಅಳಂದ ೮೨) ಚಿಂಚೋಳಿ ೮೩) ಚಿತ್ತಾಪುರ ೮೪) ಗುಲ್ಬರ್ಗ ೮೫) ಜೀವರ್ಗಿ ೮೬) ಸೇಡಂ ೮೭) ಶಹಾಪುರ ೮೮) ಯಾದಗಿರಿ
೧೪	ಬೀದರ್	೮೯) ಬಸವಕಲ್ಯಾಣ ೯೦) ಔರಾದ್ ೯೧) ಬೀದರ್ ೯೨) ಹುಮ್ನಾಬಾದ್ ೯೩) ಭಾಲ್ಕಿ
೧೫	ಬೆಳಗಾಂ	೯೪) ರಾಮದುರ್ಗ ೯೫) ರಾಯಭಾಗ್ ೯೬) ಸವದತ್ತಿ ೯೭) ಬೈಲಹೊಂಗಲ ೯೮) ಹುಕ್ಕೇರಿ ೯೯) ಅಥಣಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೧೬	ಬಾಗಲಕೋಟೆ	೧೦೦) ಬಾದಾಮಿ ೧೦೧) ಬಾಗಲಕೋಟೆ ೧೦೨) ಮುಧೋಳ ೧೦೩) ಹುನಗುಂದ ೧೦೪) ಜಮಖಂಡಿ ೧೦೫) ಬೀಳಗಿ
೧೭	ಬಿಜಾಪುರ	೧೦೬) ಬಾಗೇವಾಡಿ ೧೦೭) ಬಿಜಾಪುರ ೧೦೮) ಇಂಡಿ ೧೦೯) ಮುದ್ದೇಬಿಹಾಳ ೧೧೦) ಸಿಂಧಗಿ
೧೮	ಗದಗ್	೧೧೧) ಮುಂಡರಗಿ ೧೧೨) ನರಗುಂದ ೧೧೩) ಶಿರಹಟ್ಟಿ ೧೧೪) ಗದಗ್ ೧೧೫) ರೋಣ
೧೯	ಹಾಸನ	೧೧೬) ಅರಸೀಕೆರೆ ೧೧೭) ಚನ್ನರಾಯಪಟ್ಟಣ ೧೧೮) ಬೇಲೂರು ೧೧೯) ಹೊಳೆನರಸೀಪುರ
೨೦	ಚಿಕ್ಕಮಗಳೂರು	೧೨೦) ಚಿಕ್ಕಮಗಳೂರು ೧೨೧) ಕಡೂರು
೨೧	ಶಿವಮೊಗ್ಗ	೧೨೨) ಭದ್ರಾವತಿ ೧೨೩) ಶಿಕಾರಿಪುರ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
೨೨	ಹಾವೇರಿ	೧೨೪) ರಾಣೆಬೆನ್ನೂರು ೧೨೫) ಹಿರೇಕೆರೂರು ೧೨೬) ಸವಣೂರು
೨೩	ಧಾರವಾಡ	೧೨೭) ನವಲಗುಂದ ೧೨೮) ಕುಂದಗೋಳ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೭೦ (೨೪೩೦)

ಸದಸ್ಯರ ಹೆಸರು : ಶ್ರೀ ಶಿವರಾಮು ಬಿ (ಗಂಡಸಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ೨೦೦೬–೦೭ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಯಾವ ತಾಲ್ಲೂಕುಗಳನ್ನು ಬರಗಾಲ ಪ್ರದೇಶವೆಂದು ಸರ್ಕಾರ ಘೋಷಿಸಿದೆ ;

ಆ) ಯಾವಾಗ ಘೋಷಿಸಿದ ಅದರ ಪ್ರತಿಯನ್ನು ಒದಗಿಸುವುದು ;

ಇ) ಹಾಗಿದ್ದಲ್ಲಿ ಈ ಜಿಲ್ಲೆಗೆ ಒದಗಿಸಿರುವ ಹಣವೆಷ್ಟು ಹಾಗೂ ಬಿಡುಗಡೆಯಾಗಿರುವ ದಿನಾಂಕ ಮತ್ತು ತಾಲ್ಲೂಕು ವಾರುಗಳಿಗೆ ಬಿಡುಗಡೆಯಾದ ಮೊತ್ತವೆಷ್ಟು (ಮಾಹಿತಿ ಒದಗಿಸುವುದು) ;

ಈ) ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು ;

ಉ) ಯಾವ ಇಲಾಖೆ ಮೂಲಕ ಕಾಮಗಾರಿ ಗಳನ್ನು ಹಾಗೂ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ;